## ನವಿಲುಗನ್ನಡಿ

- ಫೆಬ್ರುವರಿ ಸಂಚಿಕೆ ಸಂತಸ ನೀಡಿತು. 'ಎಲ್ಲಿ ಹೋದವು ಪ್ರೇಮಗೀತೆಗಳು' ಸಂಪಾದಕೀಯ ಅನೇಕ ಒಳನೋಟಗಳಿಂದ ಕೂಡಿದೆ.

  **ಎನ್. ಮಹದೇವ, ಚೆನ್ನೈ**

- 'ಮಯೂರ' ಸಂಚಿಕೆಗಳು ತನ್ನ ಹತ್ತು–ಹಲವು ವಿಶೇಷತೆಗಳಿಂದ, ಒಂದಕ್ಕಿಂತ ಒಂದು ವಿಭಿನ್ನವಾಗಿ, ವಿಶೇಷವಾಗಿ ಮೂಡಿ ಬರುತ್ತಿವೆ. ಇಡೀ ತಿಂಗಳು ಕಾಪಿಟ್ಟು ಓದುವಂತಹ ಸಂಚಿಕೆ.

  **ಭಾರತೀ ಬಿ. ಕುಲಕರ್ಣಿ, ಧಾರವಾಡ**

- ಪ್ರಭಾಕರ ಶಿಶಿಲ ಅವರ 'ತೀರ್ಪು' ಕತೆಯ ದುರಂತವನ್ನು ಈಗಾಗಲೇ ಹಲವರ ಕತೆ–ಕಾದಂಬರಿಗಳಲ್ಲಿ ಓದಿದ್ದರೂ ಈ ಕತೆ ಹೊಸದಾಗಿ ಚಿಂತನೆಗೆ ಹಚ್ಚಿತು.

  **ಕೆ.ಕೆ. ರೈ, ಮಂಗಳೂರು**

- 'ತೀರ್ಪು' ಕತೆ ಪುರುಷ ಮತ್ತು ಮಹಿಳೆಯ ಕಾಮಜೀವನ, ಸಂಬಂಧಗಳ ಒಳಸುಳಿಗಳ ಕುರಿತು ಹೇಳುತ್ತದೆ. ಅಕ್ಕಮಹಾದೇವಿಯ ವಚನಗಳು ಕತೆಗೆ ಕಾವ್ಯಸ್ಪರ್ಶ ನೀಡಿವೆ.


  **ಕುತ್ಯಾಳ ನಾಗಪ್ಪ ಗೌಡ, ಸುಳ್ಯ**

- ಕತೆಗಾರ ಫಕೀರ್ ಮಹಮ್ಮದ್ ಕಟ್ಪಾಡಿ ಅವರ ಜೊತೆಗಿನ ಮಾತು–ಕತೆ 'ಬದಲಾಗದ ಬಾವಿ ನೀರು ಮತ್ತು ಬದಲಾಗಿರುವ ಊರು' ಚೆನ್ನಾಗಿತ್ತು.

  **ಅರವಿಂದ ಜಿ. ಜೋಷಿ, ಮೈಸೂರು,**
  **ರಾಮಚಂದ್ರ ಗೆದ್ದಣ್ಣವರ, ಧಾರವಾಡ**

- ಮುಸ್ಲಿಂ ಸಮುದಾಯದ ರೀತಿನೀತಿಗಳನ್ನು ಪರಿಚಯಿಸಿದ ಕತೆಗಾರ ಕಟ್ಪಾಡಿ ಅವರ ಸಂದರ್ಶನ ಸೊಗಸಾಗಿತ್ತು.

  **ಕೆ. ಕೃಷ್ಣಕುಮಾರಿ, ಬೆಂಗಳೂರು**




- ಕುಡುಕ ಮಹಾಶಯರ ಮೋಜಿನ ಕ್ಷಣಗಳನ್ನು ತುರುವೇಕೆರೆ ರವಿಶಂಕರ ಅವರ 'ಮಹಾನಗರಿಯ ಮದ್ಯವರ್ತಿಗಳು' ಪ್ರಬಂಧ ಚೆನ್ನಾಗಿ ಕಟ್ಟಿಕೊಟ್ಟಿದೆ. ಪ್ರಬಂಧ ಎಂಥವರನ್ನೂ ನಗೆಗಡಲಲ್ಲಿ ತೇಲಿಸುತ್ತದೆ.

  **ಪಿ. ಜಯವಂತ ಪೈ, ಕುಂದಾಪುರ**

- ಪ್ರೇಮ, ಕಾಮ, ಕಾವ್ಯದ ಕುರಿತಾದ 'ಪ್ರೇಮವೆನಲು ಹಾಸ್ಯವೆ?' ಮನಸಿಗೆ ಮುದ ಕೊಡುವಂತಿತ್ತು.

  **ನಿಹಾರಿಕಾ ಶೆಣೈ, ಚಿಕ್ಕಮಗಳೂರು**

- ಗೋಪಾಲಕೃಷ್ಣ ಕುಂಟನಿಯವರ ಕತೆ 'ಚಿಪ್ಪೊಡೆಯಲೇ ಇಲ್ಲ ಮುತ್ತಾಗಲೇ ಇಲ್ಲ' (ನವಿಲುಗರಿ) ಈಗಲೂ ಪ್ರಸ್ತುತ. ಪತ್ರದ ಬದಲು ಈಗ ಗ್ಯಾಜೆಟ್ ಬಂದಿದೆ.

  **ಶೋಭಾ ಅರಸ್**

- ಮುಖಪುಟ ಒಂದು ಸುಂದರ 'ಪ್ರೇಮ ಕಾವ್ಯ'ದಂತಿದೆ. ನಾಗರಾಜ ವಸ್ತಾರೆಯವರ 'ಸಂಸ್ಕಾರ ರೈಟ್ಸ್' ಕತೆ ಹೊಸತನದಿಂದ ಕೂಡಿದೆ.

  **ಎಂ. ಸದಾಶಿವಪ್ಪ, ಶಾಂತಿ ಸರೋಜಿನಿ,**
  **ಚಿಕ್ಕಮಗಳೂರು**